# ಕಥೋಪದೇಶ



# ಸ್ನೇಹದ ಹಸ್ತ

ಸಂಗ್ರಹ : ಶ್ರೀಮತಿ, ಎಂ. ಗೌರಿ, ಮೈಸೂರು.

ಚಿತ್ರ : ಶ್ರೀ ಪಿ. ಪುರುಷೋತ್ತಮ ಕಾರಂತ, ಮಂಗಳೂರು.

ಒಮ್ಮೆ ಸ್ವಾಮಿ ರಾಮತೀರ್ಥರು ಜಪಾನ್‌ನಿಂದ ಅಮೆರಿಕಕ್ಕೆಂದು ಹಡಗಿನಲ್ಲಿ ಪಯಣಿಸುತ್ತಿದ್ದರು. ಹಡಗು ಸ್ಯಾನ್‌ಫ್ರಾನ್ಸಿಸ್ಕೋ ಬಂದರು ತಲುಪುತ್ತಿದ್ದ ಹಾಗೆ ಪ್ರಯಾಣಿಕರೆಲ್ಲರೂ ತಮ್ಮ ಸರಂಜಾಮುಗಳನ್ನೆಲ್ಲ ಜೋಡಿಸಿಕೊಂಡು ಇಳಿಯಲು ಸಿದ್ಧರಾಗುತ್ತಿದ್ದರು. ಆದರೆ ಸ್ವಾಮಿಜಿಯವರು ಮಾತ್ರ ಹಡಗಿನಲ್ಲಿ ನಿಶ್ಚಿಂತರಾಗಿ ನಿಧಾನವಾಗಿ ಓಡಾಡಿಕೊಂಡಿದ್ದರು. ಒಬ್ಬ ಪಾಶ್ಚಾತ್ಯ ಯಾತ್ರಿಕನ ಗಮನ ಇವರತ್ತ ಹರಿಯಿತು. ಅವನು ಸ್ವಾಮಿಜಿಯವರನ್ನು ಕೇಳಿದ: "ನಿಮ್ಮ ಪ್ರಯಾಣದ ಸಾಮಾನುಗಳೆಲ್ಲಿ?" "ನನ್ನ ಬಳಿ ಯಾವ ವಸ್ತುವೂ ಇಲ್ಲ. ಇರಬೇಕಾದುದೆಲ್ಲ ನನ್ನಲ್ಲಿಯೇ ಇದೆ" ಎಂದರು ರಾಮತೀರ್ಥರು.

"ಏನು? ನಿಮ್ಮ ಬಳಿ ಸ್ವಲ್ಪವೂ ಹಣವೇ ಇಲ್ಲವೇ?"—ಆತ ಕೇಳಿದ.



"ಇಲ್ಲ."

"ಹಾಗಾದರೆ ನಿಮ್ಮ ಜೀವನ ನಡೆಯುವುದು ಹೇಗೆ?"

"ಎಲ್ಲರೊಂದಿಗೆ ಪ್ರೇಮದಿಂದ ವ್ಯವಹರಿಸುವುದೇ ನನ್ನ ಜೀವನ. ನಾನು ಬಾಯಾರಿದಾಗ ನೀರು ದೊರೆಯುವುದು. ನನ್ನ ಹಸಿವಿಗೆ ರೊಟ್ಟಿಯ ಚೂರೂ ಅವಶ್ಯವಾಗಿ ದೊರೆಯುವುದು."

"ನಿಮ್ಮ ದೇಶದಲ್ಲಿ ಹಾಗಿರಬಹುದು. ಆದರೆ ಅಮೆರಿಕದಲ್ಲಿ ನಿಮಗೆ ಸ್ನೇಹಿತರಿರುವರೇನು?"

"ಯಾಕಿಲ್ಲ, ಅವಶ್ಯವಾಗಿ. ಈಗ ತಾನೇ ಒಬ್ಬ ಅಮೆರಿಕನ್ನನು ನನ್ನ ಸ್ನೇಹಿತನಾಗಿದ್ದಾನೆ" ಎಂದು ಹೇಳುತ್ತಾ ಸ್ವಾಮಿಜಿಯವರು ಆತನ ಭುಜದ ಮೇಲೆ ಕೈಯಿಟ್ಟರು.

ಅವರ ಆತ್ಮೀಯತೆ ತುಂಬಿದ ಮಾಂತ್ರಿಕ ಸ್ಪರ್ಶದ ಪ್ರಭಾವದಿಂದ ಹಾಗೂ ಅವರು ತೋರಿದ ವಿಶ್ವಾಸದಿಂದ ಆ ವ್ಯಕ್ತಿಯಲ್ಲಿ ವಿಶಿಷ್ಟ ಅನುಭವ ಉಂಟಾಗತೊಡಗಿತು. ಪರಸ್ಪರರಲ್ಲಿ ಅನೇಕ ವರ್ಷಗಳ ಮೈತ್ರಿಯಿದೆಯೇನೋ ಎನ್ನುವಂತೆ ಅವರು ಆಪ್ತ ಮಿತ್ರರಾದರು. ಇದಾದ ಅನಂತರ ಆ ವ್ಯಕ್ತಿ ಸ್ವಾಮೀಜಿಯವರು ಸ್ಯಾನ್‌ಫ್ರಾನ್ಸಿಸ್ಕೋಗೆ ಬಂದಾಗಲೆಲ್ಲ ಅವರನ್ನು ಅತ್ಯಂತ ಆದರದಿಂದ ಸತ್ಕರಿಸುತ್ತಿದ್ದರು.

**ತಿದ್ದುಪಡಿ:** ಮೇ ೨೦೦೫ರ ಸಂಚಿಕೆಯ ಕಥೋಪದೇಶದ ಚಿತ್ರದ ಕಲಾವಿದರು ಶ್ರೀ ಪಿ. ಪುರುಷೋತ್ತಮ ಕಾರಂತ, ಮಂಗಳೂರು.